# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 71 (13)
ಸದಸ್ಯರ ಹೆಸರು : ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 13-02-2023
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ ಸಕಾಲ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಖಾಸಗಿ ಒಡೆತನದ ವಿದ್ಯಾ ಸಂಸ್ಥೆಗಳಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆ ನೀಡಿದ ಶೈಕ್ಷಣಿಕ ಮಾನ್ಯತೆ (Academic Recognition) ಅವಧಿ ಮುಗಿದಿದ್ದು, ಇದುವರೆವಿಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಶೈಕ್ಷಣಿಕ ಮಾನ್ಯತೆ ನವೀಕರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ಹೌದು |
| ಆ) | ಶೈಕ್ಷಣಿಕ ಮಾನ್ಯತೆ ಅವಧಿ ಮುಗಿದ, ನಂತರ ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು ಶೈಕ್ಷಣಿಕ ಮಾನ್ಯತೆ ನವೀಕರಿಸಲು ಪ್ರಸ್ತಾವನೆಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಲ್ಲಿಸಿದರೆ ಯಾವುದೇ ಕ್ರಮ ಕೈಗೊಳ್ಳದೆ ಪ್ರಸ್ತಾವನೆಯನ್ನು ಹಿಂದಿರುಗಿಸಲು ಕಾರಣವೇನು ಹಾಗೂ ಶೈಕ್ಷಣಿಕ ಮಾನ್ಯತೆ ನವೀಕರಿಸಲು ಇರುವ ಅಡೆ ತಡೆಗಳೇನು; (ವಿವರ ನೀಡುವುದು) | ಪದವಿ ಪೂರ್ವ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿ ಬರುವ ಖಾಸಗಿ ಅನುದಾನಿತ / ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಮಾನ್ಯತೆಯನ್ನು 2016-17ನೇ ಸಾಲಿನವರೆಗೆ ನವೀಕರಿಸಿದೆ.<br><br>2017-18 ರಿಂದ 2021-22ರವರೆಗೆ ಖಾಸಗಿ ಅನುದಾನಿತ / ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಮಾನ್ಯತೆಯನ್ನು ನವೀಕರಿಸುವ ಪ್ರಕ್ರಿಯೆಯನ್ನು ಆನ್-ಲೈನ್ ಮೂಲಕ ಕ್ರಮವಹಿಸಲು ಅರ್ಜಿ ಸಿದ್ಧಪಡಿಸಲಾಗುತ್ತಿದ್ದು, ಅಪ್ಲಿಕೇಷನ್ ಸಿದ್ದಗೊಂಡ ತಕ್ಷಣವೇ ಅರ್ಹ ಕಾಲೇಜುಗಳ ಮಾನ್ಯತೆಯನ್ನು ನವೀಕರಿಸಲು ಕ್ರಮವಹಿಸಲಾಗುವುದು.<br><br>ಶೈಕ್ಷಣಿಕ ಮಾನ್ಯತೆ ನವೀಕರಿಸಲು ಸರ್ಕಾರ ರೂಪಿಸಿರುವ ಮಾನದಂಡಗಳ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಇ) | ಶೈಕ್ಷಣಿಕ ಮಾನ್ಯತೆ ನವೀಕರಿಸಲು ಸರ್ಕಾರ ರೂಪಿಸಿರುವ ಮಾನದಂಡಗಳೇನು ಹಾಗೂ ಶೈಕ್ಷಣಿಕ ಮಾನ್ಯತೆಯನ್ನು ನವೀಕರಿಸಲು ಸರ್ಕಾರ ಎಂದಿನಿಂದ ಕಾರ್ಯಪ್ರವೃತ್ತವಾಗಲಿದೆ? (ವಿವರ ನೀಡುವುದು) | |

**ಸಂಖ್ಯೆ: ಇಪಿ 28 ಡಿಜಿಡಬ್ಲ್ಯೂ 2023**

(ಬಿ.ಸಿ. ನಾಗೇಶ್)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ ಸಕಾಲ ಸಚಿವರು

ಅನುಬಂಧ - A ಪುಟ 71(13) 6

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 2-11-2006

ಇಡಿ 113 ವಿವಿಧ 2005

**ಸುತ್ತೋಲೆ**

ವಿಷಯ:- ರಾಜ್ಯದಲ್ಲಿ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಮಾನ್ಯತೆ ನೀಡುವ ಬಗ್ಗೆ.

ಉಲ್ಲೇಖ:- (1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ದಿನಾಂಕ: 17-08-2002ರ ಸುತ್ತೋಲೆ ಸಂಖ್ಯೆ: ಸಿ8(8) ಶಾಶಿಅ/ಅಧಿಕ ವಿಭಾಗ /2001-02.

(2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ದಿನಾಂಕ: 12-12-2002ರ ಸುತ್ತೋಲೆ ಸಂಖ್ಯೆ: ಸಿ8(3) ಶಾಶಿಅ/ಅಧಿಕ ವಿಭಾಗ / 2001-2002.

(3) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ದಿನಾಂಕ: 17-09-2005ರ ಸುತ್ತೋಲೆ ಸಂಖ್ಯೆ: ಸಿ8(7)ಶಾಶಿಅ/ಸುತ್ತೋಲೆ 01/2005-06.

---

ಇತರೆ ಅಂಶಗಳ ಜೊತೆಗೆ, ರಾಜ್ಯದಲ್ಲಿನ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಮಾನ್ಯತೆ ನೀಡುವ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಉಲ್ಲೇಖಿತ ದಿನಾಂಕ: 17-08-2002ರ ಸುತ್ತೋಲೆಯನ್ವಯ, ಅದರ ಪುಟ-1 ರಿಂದ 4ರಲ್ಲಿನ ಭಾಗ-1ರಲ್ಲಿರುವಂತೆ ಸೂಚನೆಗಳನ್ನು ನೀಡಲಾಗಿದೆ. ತದ ನಂತರ, ಈ ಕುರಿತು ಮೇಲೆ (2) ಮತ್ತು (3)ರಲ್ಲಿ ಉಲ್ಲೇಖಿಸಲಾದ ಸುತ್ತೋಲೆಗಳನ್ವಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಸೂಚನೆಗಳನ್ನು ನೀಡಿರುತ್ತಾರೆ.

2. ಮೇಲೆ (2) ಮತ್ತು (3)ರಲ್ಲಿ ಉಲ್ಲೇಖಿಸಲಾದ ಸುತ್ತೋಲೆಗಳಲ್ಲಿನ ಸೂಚನೆಗಳ ಪ್ರಕಾರ, ಮೇಲೆ (1)ರಲ್ಲಿ ಉಲ್ಲೇಖಿಸಲಾದ ಸುತ್ತೋಲೆಯನ್ನು ಭಾಗಶ: ಮಾರ್ಪಡಿಸಿ, ನಿಗದಿತ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಶಾಲೆಗಳಿಗೆ ಸಂಬಂಧಿಸಿದಂತೆ, ಮಾನ್ಯತೆಯ ನವೀಕರಣಕ್ಕಾಗಿ ಯಾವುದೇ ಕಾಲಮಿತಿ ನಿಗದಿಪಡಿಸದೆ, "ಮಾನ್ಯತೆ ನೀಡಿದೆ" ಎಂದು ಸಕ್ಷಮ ಪ್ರಾಧಿಕಾರಗಳು ಆದೇಶ ನೀಡಬೇಕೆಂದು ಸೂಚಿಸಲಾಗಿದೆ. ನಿಗದಿತ ಮೂಲಭೂತ ಸೌಲಭ್ಯಗಳನ್ನು ಹೊಂದದೇಯಿರುವ ಶಾಲೆಗಳಿಗೆ ಸಂಬಂಧಿಸಿದಂತೆ, ಸದರಿ ಸುತ್ತೋಲೆಗಳನ್ವಯ, ಮೂರು ವರ್ಷಗಳ ಅವಧಿಗಾಗಿ ಮಾನ್ಯತೆಯನ್ನು ನೀಡಿ, ಮೂರು ವರ್ಷಗಳಿಗೊಮ್ಮೆ ಮಾನ್ಯತೆಯನ್ನು ನವೀಕರಿಸಬೇಕೆಂದು ಸೂಚಿಸಲಾಗಿದೆ.

3. ಕಂಡಿಕೆ-2ರಲ್ಲಿ ಉಲ್ಲೇಖಿಸಲಾದ ಸೂಚನೆಗಳನ್ನು ಉಲ್ಲಂಘಿಸಿ, ಸಕ್ಷಮ ಪ್ರಾಧಿಕಾರಗಳು ಮಾನ್ಯತೆಯನ್ನು ಪ್ರತಿವರ್ಷವೂ ಪಡೆದುಕೊಳ್ಳತಕ್ಕದ್ದೆಂದು ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಒತ್ತಡ ತರುತ್ತಿರುವುದು ಸರ್ಕಾರದ ಗಮನಕ್ಕೆ

ಬಂದಿದೆ. ಇದನ್ನು ನಿವಾರಿಸಲು ಹಾಗೂ ಮಾನ್ಯತೆ ನವೀಕರಣಕ್ಕಾಗಿ ಹಾಗೂ ಶಾಶ್ವತ ಮಾನ್ಯತೆ ನೀಡಲು ಪರಿಷ್ಕರಿಸಿದ ಸೂಚನೆಗಳನ್ನು ನೀಡಬೇಕೆಂದು ಸರ್ಕಾರ ಮನಗಂಡಿದೆ.

4. ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ, ಮೇಲೆ ಉಲ್ಲೇಖಿಸಲಾದ ಸುತ್ತೋಲೆಗಳಲ್ಲಿ ಒಳಗೊಂಡ ಸೂಚನೆಗಳನ್ನು ಮಾರ್ಪಡಿಸಿ, ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಸೂಚನೆಗಳನ್ನು ಈ ಮೂಲಕ ನೀಡಿದೆ:-

(1) ಯಾವುದೇ ಖಾಸಗಿ ಪ್ರಾಥಮಿಕ ಶಾಲೆ ಅಥವಾ ಖಾಸಗಿ ಪ್ರೌಢ ಶಾಲೆ ಅಥವಾ ಖಾಸಗಿ ಪದವಿ ಪೂರ್ವ ಕಾಲೇಜಿಗೆ, ಈ ಸುತ್ತೋಲೆಯನ್ನು ಹೊರಡಿಸಿದ ದಿನಾಂಕದ ನಂತರ, ಮೊಟ್ಟ ಮೊದಲನೆಯ ಬಾರಿ ಮಾನ್ಯತೆ ನೀಡುವ ಸಂದರ್ಭದಲ್ಲಿ, ಅದನ್ನು ಕನಿಷ್ಠ ಐದು ವರ್ಷಗಳ ಅವಧಿಗೆ ನೀಡತಕ್ಕದ್ದು. ತದನಂತರ, ಅದೇ ಅವಧಿಗಾಗಿ ಅಂದರೆ, ಪ್ರತಿ ಐದು ವರ್ಷಗಳಿಗೊಮ್ಮೆ ಅದನ್ನು ಎರಡು ಬಾರಿ ನವೀಕರಿಸತಕ್ಕದ್ದು. ಅದಾದನಂತರ, ಅಂದರೆ, 15 ವರ್ಷಗಳ ಅವಧಿ ಪೂರೈಸಿದ ನಂತರ, ನಿಗದಿತ ಮೂಲಭೂತ ಸೌಲಭ್ಯಗಳನ್ನು ಹಾಗೂ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸಿದ ಪ್ರಕರಣಗಳಲ್ಲಿ ಸಂಬಂಧಿಸಿದ ಖಾಸಗಿ ಪ್ರಾಥಮಿಕ ಶಾಲೆ ಅಥವಾ ಪ್ರೌಢ ಶಾಲೆ ಅಥವಾ ಖಾಸಗಿ ಪದವಿ ಪೂರ್ವ ಕಾಲೇಜಿಗೆ ಶಾಶ್ವತವಾಗಿ ಮಾನ್ಯತೆಯನ್ನು ನೀಡತಕ್ಕದ್ದು. ನಿಗದಿತ ಮೂಲಭೂತ ಸೌಲಭ್ಯಗಳನ್ನು ಪೂರೈಸದೇಯಿರುವ ಪ್ರಕರಣಗಳಲ್ಲಿ ಶಾಶ್ವತ ಮಾನ್ಯತೆ ನೀಡತಕ್ಕದ್ದಲ್ಲ ; ಮುಂದಿನ ಐದು ವರ್ಷಗಳ ಅವಧಿಗಳಿಗೆ ಮಾನ್ಯತೆ ನವೀಕರಿಸಬಹುದು.

(2) ಈ ಸುತ್ತೋಲೆಯನ್ನು ಹೊರಡಿಸಿದ ದಿನಾಂಕದ ಪೂರ್ವದಲ್ಲೇ ಈಗಾಗಲೇ ಮಾನ್ಯತೆಯನ್ನು ಪಡೆದಿರುವ ಪ್ರಕರಣಗಳಲ್ಲಿ ಮಾನ್ಯತೆಯ ಅವಧಿ ಮುಗಿಯುವ ಸಂದರ್ಭದಲ್ಲಿ, ಆಯಾಯ ಖಾಸಗಿ ಪ್ರಾಥಮಿಕ ಶಾಲೆ ಅಥವಾ ಖಾಸಗಿ ಪ್ರೌಢ ಶಾಲೆ ಅಥವಾ ಖಾಸಗಿ ಪದವಿ ಪೂರ್ವ ಕಾಲೇಜು ಮಾನ್ಯತೆ ನವೀಕರಣಕ್ಕಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಂತಹ ಖಾಸಗಿ ಪ್ರಾಥಮಿಕ ಶಾಲೆ ಅಥವಾ ಖಾಸಗಿ ಪ್ರೌಢ ಶಾಲೆ ಅಥವಾ ಖಾಸಗಿ ಪದವಿ ಪೂರ್ವ ಕಾಲೇಜಿನ ಮಾನ್ಯತೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನವೀಕರಿಸತಕ್ಕದ್ದು :-

(ಅ) ಈ ಉಪ ಕಂಡಿಕೆ (2)ರಲ್ಲಿ ಉಲ್ಲೇಖಿಸಿದ ಪ್ರಕರಣಗಳ ಪೈಕಿ, ಅಂದರೆ, ಈ ಸುತ್ತೋಲೆಯನ್ನು ಹೊರಡಿಸಿದ ದಿನಾಂಕದ ಪೂರ್ವದಲ್ಲೇ ಈಗಾಗಲೇ ಮಾನ್ಯತೆಯನ್ನು ಪಡೆದು ಸಂಬಂಧಿಸಿದ ಖಾಸಗಿ ಪ್ರಾಥಮಿಕ ಶಾಲೆ ಅಥವಾ ಖಾಸಗಿ ಪ್ರೌಢ ಶಾಲೆ ಅಥವಾ ಖಾಸಗಿ ಪದವಿ ಪೂರ್ವ ಕಾಲೇಜು ಹದಿನೈದು ವರ್ಷಗಳ ಅವಧಿಯನ್ನು ಪೂರೈಸಿದ್ದಲ್ಲಿ ಹಾಗೂ ನಿಗದಿತ ಮೂಲಭೂತ ಸೌಲಭ್ಯಗಳನ್ನು ಹಾಗೂ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸಿದ್ದಲ್ಲಿ, ಅದಕ್ಕೆ ಸಂಬಂಧಿಸಿದಂತೆ, ಶಾಶ್ವತ ಮಾನ್ಯತೆ ನೀಡತಕ್ಕದ್ದು.

(ಆ) ಈ ಉಪ ಕಂಡಿಕೆ (2)ರಲ್ಲಿ ಉಲ್ಲೇಖಿಸಿದ ಪ್ರಕರಣಗಳ ಪೈಕಿ, ಅಂದರೆ, ಈ ಸುತ್ತೋಲೆಯನ್ನು ಹೊರಡಿಸಿದ ದಿನಾಂಕದ ಪೂರ್ವದಲ್ಲೇ ಈಗಾಗಲೇ ಮಾನ್ಯತೆಯನ್ನು ಪಡೆದು ಸಂಬಂಧಿಸಿದ ಖಾಸಗಿ ಪ್ರಾಥಮಿಕ

ಶಾಲೆ ಅಥವಾ ಖಾಸಗಿ ಪ್ರೌಢ ಶಾಲೆ ಅಥವಾ ಖಾಸಗಿ ಪದವಿ ಪೂರ್ವ ಕಾಲೇಜು ಹದಿನೈದು ವರ್ಷಗಳ ಅವಧಿಯನ್ನು ಪೂರೈಸಿದೇ ಇದ್ದಲ್ಲಿ, ಅದು ಹದಿನೈದು ವರ್ಷಗಳ ಅವಧಿ ಪೂರೈಸುವವರೆಗೆ ಪ್ರತಿ ಐದೈದು ವರ್ಷಗಳಿಗೊಮ್ಮೆ ಅದರ ಮಾನ್ಯತೆಯನ್ನು ನವೀಕರಿಸತಕ್ಕದ್ದು. ಅದಾದನಂತರ, ಅಂದರೆ, 15 ವರ್ಷಗಳ ಅವಧಿ ಪೂರೈಸಿದ ನಂತರ, ನಿಗದಿತ ಮೂಲಭೂತ ಸೌಲಭ್ಯಗಳನ್ನು ಹಾಗೂ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸುವ ಪ್ರಕರಣಗಳಲ್ಲಿ ಸಂಬಂಧಿಸಿದ ಖಾಸಗಿ ಪ್ರಾಥಮಿಕ ಶಾಲೆ ಅಥವಾ ಖಾಸಗಿ ಪ್ರೌಢ ಶಾಲೆ ಅಥವಾ ಖಾಸಗಿ ಪದವಿ ಪೂರ್ವ ಕಾಲೇಜಿಗೆ ಶಾಶ್ವತವಾಗಿ ಮಾನ್ಯತೆಯನ್ನು ನೀಡತಕ್ಕದ್ದು. ನಿಗದಿತ ಮೂಲಭೂತ ಸೌಲಭ್ಯಗಳನ್ನು ಪೂರೈಸದೇಇರುವ ಪ್ರಕರಣಗಳಲ್ಲಿ ಶಾಶ್ವತ ಮಾನ್ಯತೆ ನೀಡತಕ್ಕದಲ್ಲ. ಪೂರೈಸುವವರೆಗೆ ಮುಂದಿನ ಐದು ವರ್ಷಗಳ ಅವಧಿಗಳಿಗೆ ಮಾನ್ಯತೆ ನವೀಕರಿಸುವುದು.

5. ಮೇಲಿನ ಕಂಡಿಕೆ-4ರಲ್ಲಿನ ಸೂಚನೆಗಳನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಅದನ್ನು ಉಲ್ಲಂಘಿಸಿ, ಸಕ್ಷಮ ಪ್ರಾಧಿಕಾರಗಳು ಮಾನ್ಯತೆಯನ್ನು ಪ್ರತಿ ವರ್ಷವೂ ಅಥವಾ ಐದು ವರ್ಷಗಳಿಗಿಂತ ಕಡಿಮೆ ಅವಧಿಗಾಗಿ ಮಾನ್ಯತೆಯನ್ನು ನವೀಕರಿಸುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ ಅದನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

6. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಈ ಸುತ್ತೋಲೆಯಲ್ಲಿ ಒಳಗೊಂಡ ಸೂಚನೆಗಳಿಗೆ ರಾಜ್ಯಾದ್ಯಂತ ಸಾಕಷ್ಟು ಪ್ರಚಾರ ಕೊಡಬೇಕು. ಇದನ್ನು ಶಿಕ್ಷಣ ವಾರ್ತೆಯಲ್ಲಿಯೂ ಪ್ರಕಟಿಸತಕ್ಕದ್ದು. ಸಾರ್ವಜನಿಕ ಶಿಕ್ಷಣ ಇಲಾಖೆಯ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರು ಈ ಸುತ್ತೋಲೆಯ ಪ್ರತಿಯನ್ನು ಅವರವರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಖಾಸಗಿ (ಅನುದಾನಿತ ಮತ್ತು ಅನುದಾನರಹಿತ) ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರುಗಳ ಹಾಗೂ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಗಮನಕ್ಕೆ ತರತಕ್ಕದ್ದು.

(ಟಿ.ಎಂ.ವಿಜಯಭಾಸ್ಕರ್)
ಸರ್ಕಾರದ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರು ಈ ಸುತ್ತೋಲೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 1000 ಪ್ರತಿಗಳನ್ನು ಶಿಕ್ಷಣ ಇಲಾಖೆಯ ಸಾಮಾನ್ಯ-2 ಶಾಖೆಗೆ ಒದಗಿಸಬೇಕೆಂದು ಕೋರಿದೆ.

**ಪ್ರತಿ:**

1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.

3) ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.

4) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.

5) ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

6) ನಿರ್ದೇಶಕರು, (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

7) ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು.

8) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಂಟಿ / ಉಪ ನಿರ್ದೇಶಕರುಗಳು / ಕ್ಷೇತ್ರ ಶಿಕ್ಷಣಾಧಿಕಾರಿಗಳು.

9) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ.

10) ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯವರ ಆಪ್ತ ಕಾರ್ಯದರ್ಶಿ.

11) ಎಲ್ಲಾ ಸಹ / ಉಪ / ಅಧೀನ ಕಾರ್ಯದರ್ಶಿಗಳು / ಶಾಖಾಧಿಕಾರಿಗಳು

12) ವಾರ್ಷಿಕ ಸಂಕಲನ (Annual Compendium)

13) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿಇ/ಸಿಬ್ಬಂದಿ-3/ಯುಯು/ಕಾಮಾನ/2014-15

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-12,
ದಿನಾಂಕ 04-07-2016.

## ಸುತ್ತೋಲೆ

ವಿಷಯ: ರಾಜ್ಯದ ಖಾಸಗಿ ಪದವಿ ಪೂರ್ವ ಕಾಲೇಜುಗಳ ಮಾನ್ಯತೆ ನವೀಕರಿಸುವ ಬಗ್ಗೆ.

ಉಲ್ಲೇಖ:1. ಈ ಕಛೇರಿಯ ಸಮ ಸಂಖ್ಯೆಯ ಪತ್ರ ದಿನಾಂಕ 15-02-2016.
2. ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ: ಇಡಿ 89 ಟಿಪಿಯು 2014 ದಿನಾಂಕ 15-06-2016.

* * * *

ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ, ಇತರೆ) ನಿಯಮಗಳು, 2006 ಈ ನಿಯಮಗಳು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 136 ಟಿಪಿಯು 1999 ದಿನಾಂಕ 09-10-2006 ರಂತೆ ದಿನಾಂಕ 07-07-2007ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಮೂಲಕ ಜಾರಿಗೆ ಬಂದಿರುತ್ತದೆ. ಈ ನಿಯಮಗಳು ಜಾರಿಗೆ ಬರುವ ಮೊದಲು ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಮಾನ್ಯತೆಯನ್ನು ನೀಡುವ ಬಗ್ಗೆ ಸರ್ಕಾರವು ಸುತ್ತೋಲೆ ಸಂಖ್ಯೆ: ಇಡಿ 113 ವಿವಿಧ 2005 ದಿನಾಂಕ 02-11-2006 ರಲ್ಲಿ ಸೂಚನೆಗಳನ್ನು ನೀಡಿತ್ತು. 2006ರ ನಿಯಮಗಳು ಜಾರಿಗೆ ಬಂದ ನಂತರ ಸದರಿ ನಿಯಮಗಳನ್ವಯ ಕಾಲೇಜುಗಳು ಹೊಂದಿರುವ ಮೂಲಭೂತ ಸೌಕರ್ಯಗಳನ್ನು ಆಧರಿಸಿ, ಕಾಲೇಜುಗಳ ವರ್ಗೀಕರಣ ಪ್ರಕ್ರಿಯೆ ನಡೆಸಿ, ಕಾಲೇಜುಗಳಿಗೆ ಮಾನ್ಯತೆ ನೀಡುವ ಕುರಿತಂತೆ ಕೆಲವು ಗೊಂದಲ ಉಂಟಾದ ಹಿನ್ನೆಲೆಯಲ್ಲಿ ಈ ಬಗ್ಗೆ ಮಾರ್ಗದರ್ಶನ ನೀಡುವಂತೆ ಉಲ್ಲೇಖ(1) ರಂತೆ ಸರ್ಕಾರವನ್ನು ಕೋರಲಾಗಿ ಸರ್ಕಾರವು ಖಾಸಗಿ ಪದವಿ ಪೂರ್ವ ಕಾಲೇಜುಗಳ ಮಾನ್ಯತೆಯನ್ನು ನವೀಕರಿಸುವ ಕುರಿತಂತೆ ಉಲ್ಲೇಖ(2)ರ ಸುತ್ತೋಲೆ ಪತ್ರದನ್ವಯ ಈ ಕೆಳಕಂಡ ಮಾರ್ಗಸೂಚಿಗಳನ್ನು ನಿಗದಿಪಡಿಸಿರುತ್ತದೆ.

1. ದಿನಾಂಕ 07-07-2007ರ ಪೂರ್ವದಲ್ಲಿ (2006ರ ನಿಯಮಗಳು ಜಾರಿಗೆ ಬಂದ ದಿನಾಂಕ) ಪ್ರಾರಂಭವಾದ ಮತ್ತು 2006ರ ನಿಯಮಗಳು ಜಾರಿಗೆ ಬರುವ ಪೂರ್ವದಲ್ಲಿ ಜಾರಿಯಲ್ಲಿದ್ದ ಮಾನದಂಡಗಳನ್ವಯ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಪದವಿ ಪೂರ್ವ ಕಾಲೇಜುಗಳ ಮಾನ್ಯತೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 113 ವಿವಿಧ 2005 ದಿನಾಂಕ 02-11-2006 ರಂತೆ 05 ವರ್ಷ ಅಥವಾ 15 ವರ್ಷಗಳಿಗೆ ನವೀಕರಿಸತಕ್ಕದ್ದು.
2. ದಿನಾಂಕ 07-07-2007 ರಂದು ಮತ್ತು ನಂತರ ಪ್ರಾರಂಭಿಸಲಾದ ಮತ್ತು 2006ರ ನಿಯಮಗಳಲ್ಲಿ ನಿಗದಿಪಡಿಸಲಾದ ಮಾನದಂಡಗಳನ್ವಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಮಾನ್ಯತೆಯನ್ನು ನವೀಕರಿಸುವ ಬಗ್ಗೆ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 113 ವಿವಿಧ 2005 ದಿನಾಂಕ 02-11-2006 ರಂತೆ ಕ್ರಮವಹಿಸತಕ್ಕದ್ದು.

.2.

3. ದಿನಾಂಕ 31-03-2017 ರೊಳಗೆ ನಿಗದಿತ ಮೂಲಭೂತ ಸೌಕರ್ಯಗಳನ್ನು ಹೊಂದುವುದಾಗಿ ಸಂಬಂಧಿಸಿದ ಸಂಸ್ಥೆಯಿಂದ ರೂ 200/-ರ ಇ-ಸ್ಟಾಂಪ್ ಪತ್ರದಲ್ಲಿ ಮುಚ್ಚಳಿಕೆ ಪತ್ರ ಬರೆಸಿಕೊಂಡು, ನಿಗದಿತ ಮೂಲಭೂತ ಸೌಕರ್ಯಗಳನ್ನು (ಪ್ರಾರಂಭಗೊಂಡ ದಿನಾಂಕಕ್ಕೆ ಅನ್ವಯಿಸುವಂತೆ) ಹೊಂದಿರದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಮಾನ್ಯತೆಯನ್ನು ಸಹ 2016-17ನೇ ಸಾಲಿನವರೆಗೆ ನವೀಕರಿಸತಕ್ಕದ್ದು. ಅದರಂತೆ ದಿನಾಂಕ 31-03-2017 ರೊಳಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳಲು ವಿಫಲವಾದಲ್ಲಿ 2017-18ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪಿಯುಸಿ ತರಗತಿಯನ್ನು ಮುಚ್ಚತಕ್ಕದ್ದು.
4. ಮೇಲಿನ ಪ್ರಕ್ರಿಯೆಯನ್ನು ದಿನಾಂಕ 31-08-2016 ರೊಳಗೆ ಮುಕ್ತಾಯಗೊಳಿಸತಕ್ಕದ್ದು. ದಿನಾಂಕ 15-09-2016 ರೊಳಗೆ ಮೂಲಭೂತ ಸೌಕರ್ಯಗಳನ್ನು ಹೊಂದಿರದ (ಅಂಶ-3 ರಲ್ಲಿನ ಕಾಲೇಜುಗಳು) ವಿವರಗಳನ್ನೊಳಗೊಂಡ (ಕಾಲೇಜುಗಳ ಪಟ್ಟಿ ಜಿಲ್ಲಾವಾರು) ವರದಿಯನ್ನು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಖಾಸಗಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ತುರ್ತು ಸಭೆ ಕರೆದು ಉಲ್ಲೇಖ (2)ರ ಸುತ್ತೋಲೆ ಕುರಿತು ಗಮನಕ್ಕೆ ತಂದು, ಈ ಪತ್ರಕ್ಕೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನಲ್ಲಿರುವ ಅಂಶಗಳಿಗೆ ಮಾಹಿತಿ ಮತ್ತು ಪೂರಕ ದೃಢೀಕೃತ ದಾಖಲೆಗಳನ್ನು ಪಡೆದು ದಿನಾಂಕ 16-07-2016 ರೊಳಗಾಗಿ ಸದರಿ ಚೆಕ್‌ಲಿಸ್ಟ್‌ನ್ನು ದೃಢೀಕರಿಸಿ ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಿದೆ. ಒಂದು ವೇಳೆ ನಿಗದಿತ ದಿನಾಂಕದೊಳಗೆ ಚೆಕ್‌ಲಿಸ್ಟ್‌ನ್ನು ಸಲ್ಲಿಸದಿದ್ದಲ್ಲಿ ಉಲ್ಲೇಖ(2) ರಲ್ಲಿ ತಿಳಿಸಿರುವಂತೆ ಸಂಬಂಧಿಸಿದ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ಈ ಕುರಿತು ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಜನಪ್ರಿಯ ಕನ್ನಡ ಮತ್ತು ಆಂಗ್ಲ ದೈನಿಕ ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡಿ ಎಲ್ಲಾ ಶಿಕ್ಷಣ ಸಂಸ್ಥೆಗಳ ಗಮನಕ್ಕೆ ತರಲು ಕ್ರಮವಹಿಸತಕ್ಕದ್ದು. ನಿಗದಿತ ಚೆಕ್‌ಲಿಸ್ಟ್‌ನ್ನು ಇಲಾಖೆಯ ವೆಬ್‌ಸೈಟ್ www.pue.kar.nic.in ನಲ್ಲಿ word format ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಈ ಚೆಕ್‌ಲಿಸ್ಟ್‌ನ್ನೇ ಬಳಸಿ ಮಾಹಿತಿ ನೀಡಲು ಸೂಚಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ,
ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರುಗಳಿಗೆ – ಶೀಘ್ರ ಕ್ರಮಕ್ಕಾಗಿ.

ಪ್ರತಿಗಳು:-
1. ನಿರ್ದೇಶಕರು/ಜಂಟಿ ನಿರ್ದೇಶಕರು (ಮಾ ಮತ್ತು ಅ)/ಉಪ ನಿರ್ದೇಶಕರು (ಮಾ ಮತ್ತು ಅ)
2. ಎಲ್ಲಾ ಖಾಸಗಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿಯ ಅಧ್ಯಕ್ಷರು/ಕಾರ್ಯದರ್ಶಿ (ಜಿಲ್ಲಾ ಉಪ ನಿರ್ದೇಶಕರ ಮುಖಾಂತರ)
3. ನಿರ್ದೇಶಾನಲಯದ ಸಂಬಂಧಪಟ್ಟ ಶಾಖೆಯ ಎಲ್ಲಾ ಅಧಿಕಾರಿ/ಸಿಬ್ಬಂದಿಯವರುಗಳಿಗೆ
4. ಕಛೇರಿ/ಹೆಚ್ಚುವರಿ ಪ್ರತಿಗಳು.